ಶ್ರೀ ಕೆ. ಮಲ್ಲಪ್ಪ.—ಸಣ್ಣ ಕೈಗಾರಿಕೆ ಖಾನಸಿ ವಲಯದಲ್ಲಿ ಸ್ಥಾಪನೆಯಾಗಬೇಕು. ಅಲ್ಲಿ ದೊರೆಯುವ ಕಚ್ಚಾ ಮಾಲು ಉಪಯೋಗಿಸಿಕೊಂಡು ಖಾನಗಿಯವರು ಬಂದು ಕೈಗಾರಿಕೆ ಪ್ರಾರಂಭ ಮಾಡಿದರೆ ಕೈಗಾರಿಕೆಗೆ ಬೇಕಾಗುವ ಎಲ್ಲ ಪ್ರೋತ್ಸಾಹ ಸರಕಾರ ಕೊಡಲಿಕ್ಕೆ ತಯಾರಿದೆ. ಸರ್ಕಾರವೇ ಮಾಡಬೇಕೆಂಬುದು ಇಂಡಸ್ಟ್ರಿಯಲ್ ಪಾಲಸಿಗೆ ಅಂದರೆ ಸರ್ಕಾರದ ನೀತಿಗೆ ವಿರುದ್ಧವಾಗುತ್ತದೆ.

ಶ್ರೀ ಎಚ್. ಡಿ. ದೇವೇಗೌಡ.—ತಾವು ಅನೇಕ ಸಾರಿ ತಮ್ಮನ್ನು ನೋಡಿದ ಕಾಲದಲ್ಲಿ ಇಲಾಖೆಯ ಮುಖ್ಯಾಧಿಕಾರಿಗಳನ್ನು ಕರೆದುಕೊಂಡು ಬಂದು, ತಜ್ಞರನ್ನು ಕೇಳಿ ಅವರೊಡನೆ ಸಮಾಲೋಚನೆ ನಡೆಸಿ ಇಂಡಸ್ಟ್ರಿಯನ್ನು ಪ್ರಾರಂಭ ಮಾಡುವ ಬಗ್ಗೆ ಪರಿಶೀಲನೆ ಮಾಡುತ್ತೇನೆ ಎಂದು ಭರವಸೆ ಕೊಟ್ಟಿಲ್ಲವೇ ?

ಶ್ರೀ ಕೆ. ಮಲ್ಲಪ್ಪ.—ಹೌದು, ಇವತ್ತೂ ಕೂಡ ನಾನು ಬರಲಿಕ್ಕೆ ತಯಾರಾಗಿದ್ದೇನೆ.....

Mr. SPEAKER.—I want to mention it to the House that it is a parliamentary convention and much respected convention that any conversation any member had with the Ministers should not be disclosed here. Otherwise, they will not tell them anything hereafter. It is in the interest of the Hon'ble Members that I say this. If I allow such questions, it becomes a bad precedent and another member may say that I allowed such and such a question on a particular day.

1-30 P.M.

ಶ್ರೀ ಕೆ. ಎಸ್. ಸೂರ್ಯನಾರಾಯಣ ರಾವ್.—ಹೊಳೆನರಸೀಪುರದಲ್ಲಿ ಸಿಕ್ಕ ತಕ್ಕ ಟಾಲ್ಕ್‌ಗೆ ಇಂಡಿಯಾದೇಶದಲ್ಲಿ ಬಹಳ ಡಿಮ್ಯಾಂಡ್ ಇದೆ—ಫೇಸ್ ಪೌಡರ್ ಮತ್ತು ತತ್ಸಂಬಂಧವಾದ ಇಂಡಸ್ಟ್ರೀ ಮಾಡುವುದಕ್ಕೆ ಎಂಬುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಕೆ. ಮಲ್ಲಪ್ಪ.—ಫೇಸ್ ಪೌಡರ್‌ಗೆ ಆಗುತ್ತದೆಯೋ ಇಲ್ಲವೋ ಹೇಳಲಿಕ್ಕೆ ಆಗುವುದಿಲ್ಲ, ಕಾಗದ ತಯಾರು ಮಾಡಲಿಕ್ಕೆ ಆ ಟಾಲ್ಕ್ ಪೌಡರನ್ನು ಉಪಯೋಗ ಮಾಡಬಹುದು.

ಶ್ರೀ ಜಿ. ಎ. ತಿಮ್ಮಪ್ಪಗೌಡ.—ಇಲ್ಲಿ ಮೈಕಾ ಹೇರಳವಾಗಿ ಸಿಕ್ಕುತ್ತಾ ಇರುವುದರಿಂದ ಖಾಸಗಿಯವರು ಯಾರೂ ಮುಂದೆ ಬಂದಿಲ್ಲ. ಆದ್ದರಿಂದ ಸರ್ಕಾರದವರೇ ಇಲ್ಲಿ ಒಂದು ಸಣ್ಣ ಕೈಗಾರಿಕೆಯನ್ನು ಪ್ರಾರಂಭ ಮಾಡುವುದು ಸೂಕ್ತವಲ್ಲವೇ ?

ಶ್ರೀ ಕೆ. ಮಲ್ಲಪ್ಪ.—ಕೈಗಾರಿಕೆಯನ್ನು ಪ್ರಾರಂಭ ಮಾಡುವುದಕ್ಕೆ ಯಾರೂ ಮುಂದೆ ಬಂದಿಲ್ಲ ಎಂದು ಹೇಳುವುದಕ್ಕಾಗುವುದಿಲ್ಲ. ಸಣ್ಣ ಕೈಗಾರಿಕೆಗಳ ವಿಷಯದಲ್ಲಿ ಸರ್ಕಾರದವರ ನೀತಿ ಏನು ಎಂಬುದನ್ನು ಆಗಲೇ ಹೇಳಿದ್ದೇನೆ, ಸಣ್ಣ ಪುಟ್ಟ ಕೈಗಾರಿಕೆಗಳನ್ನು ತೆಗೆದುಕೊಂಡು ನಡೆಸುವುದು ಸರ್ಕಾರದ ನೀತಿ ಅಲ್ಲ. They are not public sector industries. They are private sector industries. However, if any private party is forthcoming, Government is prepared to give all assistance—technical as well as financial.

Acquisition of Survey No. 128 of Makali Village in Channapatna Taluk.

*Q.—1162. Sri T. MADAIAH GOWDA (Ramanagaram).—

Will the Government be pleased to state :—

(*a*) since how long the question of acquisition of survey No. 128 of Makali Village in Channapatna Taluk for village extension is pending ;

(*b*) when the money for the village extension was deposited by the villagers ;

(*c*) whether any responsibility for the delay is fixed ; and what action has been taken to avoid the delay in future ?

A.—Sri M. V. KRISHNAPPA (Minister for Revenue).—

(*a*) Since 1955.

(*b*) On 10-9-1959.

(*c*) No. The delay has occurred mostly because the villagers could not agree on the land which was to be acquired for the extension of the village.

ಶ್ರೀ ಟಿ. ಮಾದಯ್ಯ ಗೌಡ.—128ನೇ ಸರ್ವೇ ನಂಬರ್ ಜಮೀನು ಅತ್ಯುತ್ತಮವಾದದ್ದು ಎಂದು ಹೇಳಿ ಆರೋಗ್ಯ ಇಲಾಖೆಯವರು ಮತ್ತು ಸಬ್-ಡಿವಿಜನ್ ಸಾಹೇಬರು ಸ್ಥಳ ಅಜಮಾಯಿಷಿ ಮಾಡಿ 7-8 ವರ್ಷಗಳ ಹಿಂದೆ ತೀರ್ಮಾನ ಮಾಡಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಶ್ರೀ ಎಂ. ವಿ. ಕೃಷ್ಣಪ್ಪ.—ಆಗಿನ ಹೆರ್ತ್ ಅಥಾರಿಟೀಸ್ 115ನೇ ನಂಬರು 25 ಮತ್ತು 28 ಈ ಮೂರು ನಂಬರುಗಳೂ ಪಶ್ಚಿಮಭಾಗ ಮಾತ್ರ ಎತ್ತರದಲ್ಲಿ ಇವೆ. ಆರೋಗ್ಯಕರವಾಗಿದೆ. ಆ ಸ್ಥಳ ಅಕ್ವಿಸಿಷನ್ ಆಗಬಹುದು ಎಂದು ಹೇಳಿ ರಿಪೋರ್ಟ್ ಮಾಡಿದ್ದಾರೆ. ಅದರಮೇಲೆ ಸರ್ಕಾರದವರು ರೆಕಾರ್ಡ್ ಬರ್ಡ್‌ಅಪ್ ಮಾಡಬೇಕಾದರೆ ಲೋಕಲ್ ಪಂಚಾಯ್ತಿಯವರು ಅದು ಆಗಕೂಡದು ಎಂದು ಹೇಳಿ ಅದನ್ನು ಅಪೋಸ್ ಮಾಡಿದರು, ಆದ್ದರಿಂದ ನಿಧಾನವಾಗಿ ಕಡೆಯಲ್ಲ ಆಗಿದೆ.

ಶ್ರೀ ಟಿ. ಮಾದಯ್ಯ ಗೌಡ.—128ನೇ ನಂಬರು ಅಕ್ವೈರ್ ಆಗಬೇಕೆಂದು ಗೆಜೆಟ್ ನೋಟಿಫಿಕೇಷನ್ ಆಗಿಯೂ ಕೂಡ ಪಂಚಾಯ್ತಿಯವರು ತಡೆ ಮಾಡುತ್ತಾ ಇರುವುದು ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಎಂ. ವಿ. ಕೃಷ್ಣಪ್ಪ.—ಹೌದು, ಈ ವರ್ಷ ಜೂನ್ ತಿಂಗಳಿನಲ್ಲಿ ಪ್ರಿಲಿಮಿನರಿ ನೋಟಿಫಿಕೇಷನ್ ಆದಮೇಲೆ ಸಂಬಂಧಪಟ್ಟವರು ಅದರ ವಿರುದ್ಧ ಅಪೀಲು ಹಾಕಿಕೊಂಡಿದ್ದಾರೆ ಎಂದು ಕಾಣುತ್ತದೆ.

ಶ್ರೀ ಸಿ. ಆರ್. ರಂಗೇಗೌಡ.—ಮಾಕಳಿ ಗ್ರಾಮದಲ್ಲಿ 14 ಜನರು ಒಬ್ಬೊಬ್ಬರಿಗೂ 20 ಅಂಕಣ, 30 ಅಂಕಣ, 60 ಅಂಕಣ ಮನೆ ಇದ್ದರೂ ಕೂಡ 114ನೇ ಸರ್ವೇ ನಂಬರಿನಲ್ಲಿ ಮನೆ ಕಟ್ಟಬೇಕೆಂದು ಸೈಟು ಕೊಂಡುಕೊಂಡಿದ್ದಾರೆ. ಆದರೂ ಕೂಡ 128ನೇ ನಂಬರಿನಲ್ಲಿ ಸೈಟು ಬೇಕೆಂದು ಅವರು ಕೇಳುತ್ತಾ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಶ್ರೀ ಎಂ. ಪಿ. ಕೃಷ್ಣಪ್ಪ.—ಮಾದಯ್ಯಗೌಡರು ಕೇಳಿರುವ ಪ್ರಶ್ನೆಗೆ ತಾವೇ ಈ ಅಸೆಂಬ್ಲಿಯಲ್ಲಿ ಈಗ ಉತ್ತರ ಹೇಳಿದ ಹಾಗೆ ಆಯಿತು.

ಶ್ರೀ ಸಿದ್ದಯ್ಯ ಕಾಶೀಮಠ್.—(ಸಿ) ಪ್ರಶ್ನೆಗೆ ಉತ್ತರವಾಗಿ ಗ್ರಾಮಸ್ಥರು ಒಪ್ಪದಿರುವುದೇ ಈ ರೀತಿಯ ವಿಳಂಬ ಉಂಟಾಗುವುದಕ್ಕೆ ಮುಖ್ಯ ಕಾರಣವಾಗಿದೆ ಎಂದು ಹೇಳಿದ್ದೀರಿ. ಹಾಗಾದರೆ ಗ್ರಾಮ ವಿಸ್ತರಣೆ ಮಾಡುವಾಗ ಜನರು ಕೇಳಿದ ಸರ್ವೆ ನಂಬರನ್ನು ಕೊಡುತ್ತೀರಾ ಅಥವಾ ಯಾವುದೋ ಒಂದು ಸರ್ವೆ ನಂಬರನ್ನು ಕೊಡುತ್ತೀರಾ?

ಶ್ರೀ ಎಂ. ವಿ. ಕೃಷ್ಣಪ್ಪ.—ಜನರು ಕೇಳುವ ನಂಬರನ್ನು ಸರ್ಕಾರದ ಹೆರ್ತ್ ಅಥಾರಿಟೀಸ್ ಒಪ್ಪಬೇಕು. ಆದು ಎತ್ತರವಾದ ಸ್ಥಳದಲ್ಲಿ ಇದೆ, ಮನೆ ಕಟ್ಟಬಹುದು, ಗ್ರಾಮ ಬಡಾವಣೆಗೆ ಅನುಕೂಲವಾಗಿದೆ ಎಂದು ಅವರು ಹೇಳಿದ ಮೇಲೆ ಸರ್ಕಾರದ ರೆವಿನ್ಯೂ ಅಥಾರಿಟೀಸ್ ಅಕ್ವಿಸಿಷನ್ ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತಾರೆ. ಅದು ಹರಿಜನರಿಗೆ ಸಂಬಂಧಪಟ್ಟದ್ದಾದರೆ ಅದಕ್ಕೆ ಸಂಬಂಧಪಟ್ಟ ಅಧಿಕಾರಿಗಳು ತಕ್ಕ ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತಾರೆ.

ಶ್ರೀ ಟಿ. ಮಾದಯ್ಯ ಗೌಡ.—128ನೇ ನಂಬರಿನಲ್ಲಿ ಎಲ್ಲಾ ಅತ್ಯಗತ್ಯವಾದ ಅನುಕೂಲಗಳೂ ಇವೆ ಅದನ್ನು ಕೊಡಿಸಿಕೊಡಬೇಕೆಂದರೆ ಪ್ರತಿವರ್ಷವೂ ಕೋರ್ಟಿಗೆ ಅಪೀಲು ಹಾಕುತ್ತಾ ಇರುವುದು, ತಡಮಾಡುತ್ತಾ ಇರುವುದು ತಮ್ಮ ಗಮನಕ್ಕೆ ಬಂದಮೇಲೆ ಇದನ್ನು ರೆವಿನ್ಯೂ ಇಲಾಖೆಯವರು ಪರಿಶೀಲನೆ ಮಾಡಿನೋಡಿ ಒಂದೇ ಸಲ ಒಂದು ಸರಿಯಾದ ತೀರ್ಮಾನವನ್ನು ಮಾಡಿ ಆ ಕೆಲಸವನ್ನು ಮುಂದುವರಿಸುವುದಕ್ಕೆ ಪ್ರಯತ್ನ ಮಾಡುವುದು ಸಾಧುವಲ್ಲವೇ?

ಶ್ರೀ ಎಂ. ವಿ. ಕೃಷ್ಣಪ್ಪ.—ಮಾನ್ಯ ಸದಸ್ಯರು ಹೇಳುವುದು ಸರಿ ಅದು ಆಗಲೇಬೇಕು. ಖಾಯಂ ಆಗಿ ಮಾಡಿಸುವುದಕ್ಕೆ ಭರವಸೆ ಕೊಡುತ್ತೇನೆ. ಡೆಪ್ಯೂಟಿ ಕಮಿಷನರು ಅದನ್ನು ಪರಿಶೀಲನೆ ಮಾಡಿನೋಡಿ ಸಾಧ್ಯವಾದರೆ ಅವರೇ ಆ ಅಕ್ವಿಸಿಷನ್ ಅಪೀಲನ್ನು ತಳ್ಳಿಹಾಕಬಹುದು.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಹೆರ್ತ್ ಆಫೀಸರು ಮೊದಲು ನೋಡುತ್ತಾರೆ, ಆಮೇಲೆ ಸರ್ಕಾರದವರು ಲ್ಯಾಂಡ್ ಕೊಡುತ್ತಾರೆ ಎಂದು ಹೇಳಿದಿರಿ. ಅನೇಕಸಾರಿ ಹೆರ್ತ್ ಆಫೀಸರು ಪ್ರಭಾವಕ್ಕೆ ಒಳಪಟ್ಟು ಜನಗಳಿಗೆ ಹಿಂಸೆ ಮಾಡಿರತಕ್ಕ ಸಂದರ್ಭ ತಮ್ಮ ಗಮನಕ್ಕೆ ಬಂದಿದಿಯೇ?

ಶ್ರೀ ಎಂ. ವಿ. ಕೃಷ್ಣಪ್ಪ.—ಅದೂ ನಡೆಯುತ್ತದೆ. ಕೆಲವು ಸಂದರ್ಭಗಳಲ್ಲಿ ನಮಗೆ ದೂರು ಕೊಡುತ್ತಾರೆ.

Sri N. O. SAMAJI.—(Marathi)

ಶ್ರೀ ಎಂ. ವಿ. ಕೃಷ್ಣಪ್ಪ.—ಅದರಲ್ಲೂ ಈಗ ಪಂಚಾಯ್ತಿ ರಾಜ್ಯ ಬಂದಮೇಲೆ ಗ್ರಾಮ ಪಂಚಾಯ್ತಿಯವರು ಒಂದು ನಿರ್ಣಯ ಮಾಡಿ ಗ್ರಾಮ ಬಡಾವಣೆ ಆಗಬೇಕೆಂದು ಹೇಳುತ್ತಾರೆ. ನಾವು ತಳ್ಳಿ ಹಾಕುವುದಿಲ್ಲ. ಸ್ಥಳ ಸರಿಯಾಗಿಲ್ಲ ಎಂದು ಹೇಳಿ ತಳ್ಳಿ ಹಾಕುವುದಕ್ಕೆ ಹೆಲ್ತ್ ಆಫೀಸರಿಗೆ ಅಧಿಕಾರ ಇದೆ. Though the Panchayat has decided, it is not fit for building houses ಎಂದು ಹೇಳಿ ಅವರು ಅಭಿಪ್ರಾಯಕೊಟ್ಟರೆ ಅದನ್ನು ಆಗ ತಳ್ಳಿಹಾಕಬಹುದು.

ಶ್ರೀ ಟಿ. ಡಿ. ದೇವೇಂದ್ರಪ್ಪ.—ಹೆಲ್ತ್ ಆಫೀಸರು ಹೋಗಿ ಒಂದು ತಗ್ಗು ಪ್ರದೇಶ ಚುನಾಯಿಸಿದರೆ ಅದು ಸರಿಯಲ್ಲ ಎಂದು ಹೇಳತಕ್ಕ ಅಧಿಕಾರ ಯಾರಿಗೆ ಇದೆ ?

ಶ್ರೀ ಎಂ. ವಿ. ಕೃಷ್ಣಪ್ಪ.—ಎತ್ತರ ಪ್ರದೇಶ ವಾಸಸ್ಥಳಕ್ಕೆ ಅನುಕೂಲವಾದದ್ದು ಅಥವಾ ತಗ್ಗು ಪ್ರದೇಶ ವಾಸಸ್ಥಳಕ್ಕೆ ಅನಾನುಕೂಲವಾದದ್ದು ಎಂದು ಆ ರೀತಿ ಹೇಳುವುದಕ್ಕಾಗುವುದಿಲ್ಲ. ಬೆಂಗಳೂರಿನಲ್ಲಿ ಎಷ್ಟೋ ಕಡೆಗಳಲ್ಲಿ ತಗ್ಗು ಪ್ರದೇಶಗಳಲ್ಲಿ ಸೆಲ್ಲರ್‌ಗಳನ್ನು ಕಟ್ಟಿರತಕ್ಕ ಸಂದರ್ಭಗಳೂ ಇವೆ. ಹಳ್ಳಿಗಳಲ್ಲಿ ತಗ್ಗು ಪ್ರದೇಶ ಎಂದರೆ ನೀರು ಬರಬಹುದು ಅದರಿಂದ ಆರೋಗ್ಯಕ್ಕೆ ಅನುಕೂಲವೇ ಅನಾನುಕೂಲವೇ ಎಂಬುದನ್ನು ಹೆಲ್ತ್ ಆಫೀಸರು ಸಾಮಾನ್ಯವಾಗಿ ಹೇಳುತ್ತಾರೆ.

ಶ್ರೀ ಸಿ. ಆರ್. ರಂಗೇಗೌಡ —ಮಾಕಳಿ ಗ್ರಾಮದ ವಿಷಯದಲ್ಲಿ ಸ್ಥಳೀಯ ಅಧಿಕಾರಿಗಳು ತಹಶೀಲ್ದಾರರು, ಹೆಲ್ತ್ ಆಫೀಸರೂಕೂಡ 115ನೇ ಸರ್ವೆ ನಂಬರು ಸರಿಯಾದುದಲ್ಲ, 128ನೇ ಸರ್ವೆ ನಂಬರನ್ನೇ ಅಕ್ಸೆಪ್ಟ್ ಮಾಡಬೇಕೆಂದು ಸರ್ಕಾರದವರಿಗೆ ಅಭಿಪ್ರಾಯ ಕೊಟ್ಟಿರುವದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ಹೌದು. ಅದನ್ನು ಪಂಚಾಯ್ತಿಯವರು ಒಪ್ಪಿರಲಿಲ್ಲ. ಈಗ ಅವರನ್ನು ಒಪ್ಪಿಸಿದ್ದಾಗಿದೆ. ಪ್ರಿಲಿಮಿನರಿ ನೋಟಿಫಿಕೇಷನ್ ಜೂನ್‌ನಲ್ಲಿ ಬಂದಿದೆ. ಸೂಕ್ತ ಕಾರ್ಯಕ್ರಮ ತೆಗೆದುಕೊಂಡು ಆದಷ್ಟು ಬೇಗ ಅದನ್ನು ಅಕ್ಸೆಪ್ಟ್ ಮಾಡುವ ಏರ್ಪಾಡು ಮಾಡುತ್ತೇವೆ.

ಶ್ರೀ ಬಿ. ಎಚ್. ಲಕ್ಷ್ಮಣಯ್ಯ.—ಕೆಲವು ಗ್ರಾಮಗಳಲ್ಲಿ ಪಂಚಾಯ್ತಿಯವರ ಒಪ್ಪಿಗೆ ಆಗಿದ್ದರೂ ಕೂಡ ಅಕ್ಸೆಪ್ಟ್ ಮಾಡಿಕೊಳ್ಳದೇ ಇರುವುದಕ್ಕೆ ಕಾರಣವೇನು ?

ಶ್ರೀ ಎಂ. ವಿ. ಕೃಷ್ಣಪ್ಪ.—ಇದಕ್ಕೆ ಸಂಬಂಧಪಟ್ಟಂತೆ ಪಂಚಾಯ್ತಿಯವರು ಆಗುವುದಿಲ್ಲ ಎಂದು ಹೇಳಿದ್ದರು.

ಶ್ರೀ ಟಿ. ಮಾದಯ್ಯ ಗೌಡ.—ಸ. ನಂ. 128ಕ್ಕೆ ಗ್ರಾಮಸ್ಥರು 1,300 ರೂಪಾಯಿಗಳನ್ನು ಡಿಪಾಜಿಟ್ ಮಾಡಿ ಆರು ತಿಂಗಳಾಯಿತು. ಪ್ರಿಲಿಮಿನರಿ ನೋಟಿಫಿಕೇಷನ್ ಕೂಡ ಆಗಿದೆ. ಈಗ ಈ ಅಕ್ವಿಜಿಷನ್ ಯಾವ ರೀತಿ ಮುಂದುವರಿಯುತ್ತಿದೆ ?

ಶ್ರೀ ಎಂ. ವಿ ಕೃಷ್ಣಪ್ಪ.—ಆ ಕ್ರಮಗಳೆಲ್ಲಾ ತಮಗೂ ಗೊತ್ತಿದೆ. ನಾನು ಹೊಸದಾಗಿ ತಮಗೆ ಹೇಳತಕ್ಕದ್ದೇನಿದೆ ?

Deputy Panchayat Officers allotted from Madras State to Mysore on 1-11-1956.

*Q.—1195. Sri S. S. KOLKEBAIL (Coondapur).—

Will the Government be pleased to state :—

(*a*) the number of Deputy Panchayat Officers that were allotted from Madras State to Mysore on 1-11-1956 ;

(*b*) the posts in which they were absorbed after equation of posts;

(*c*) the posts in which they are working at present ?